**46ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು**

**ಸಿ.ಸಿ. ನಂ. 27635-2021**

**ಚಾಸಾಃ 1 ಪ್ರಾಸಾಃ 1**

| | |
|---|---|
| **ಸಾಕ್ಷಿದಾರರ ಹೆಸರು** | ಶಕುಂತಲಾ. ಆರ್.ಎಸ್ |
| **ಗಂಡನ ಹೆಸರು** | ಬಿ.ಕೆ. ನಾಗರಾಜ್ |
| **ವಯಸ್ಸು** | 59 ವರ್ಷ |
| **ಉದ್ಯೋಗ** | ಗೃಹಿಣಿ |
| **ವಿಳಾಸ** | ಬ್ಯಾಟರಾಯನಪುರ, ಬೆಂಗಳೂರು |
| **ಪ್ರ. ವ. ಬೋ ದಿನಾಂಕ** | 18.07.2024 |

**ಮುಖ್ಯ ವಿಚಾರಣೆಃ ಸರ್ಕಾರಿ ವಕೀಲರಿಂದ**

ಚಾಸಾ 2 ಮತ್ತು 3 ನನ್ನ ಸಂಬಂಧಿಕರು, ಚಾಸಾ 4 ನನ್ನ ಮಗಳು, ಚಾಸಾ 5 ರಿಂದ 7 ರವರು ನಮ್ಮ ಮನೆಯಲ್ಲಿ ಬಾಡಿಗೆದಾರರಾಗಿ ವಾಸವಾಗಿರುತ್ತಾರೆ. ಆರೋಪಿತನು ನನ್ನ ಮಗಳ ಮಾಜಿ ಪತಿ. ಚಾಸಾ 4 ರವರನ್ನು 2010ರಲ್ಲಿ ಆರೋಪಿತನಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. 2013 ರಲ್ಲಿ ನನ್ನ ಪತಿ ಮರಣಹೊಂದಿರುತ್ತಾರೆ. 2017ರಲ್ಲಿ ನನ್ನ ಮಗ ಅಪಘಾತದಲ್ಲಿ ಮರಣ ಹೊಂದಿರುತ್ತಾನೆ. ಚಾಸಾ 4 ಮತ್ತು ಆರೋಪಿತನ ಮಧ್ಯೆ ಮೇಲಿಂದ ಮೇಲೆ ಜಗಳ ಆಗುತ್ತಿತ್ತು. ಮದುವೆಯಾದ ನಂತರ ಆರೋಪಿತನಿಗೆ ಬೇರೆಯವರ ಜೊತೆ ಸಂಬಂಧ ಇರುವ ವಿಷಯ ಗೊತ್ತಾಯಿತು. ಆ ವಿಚಾರಕ್ಕಾಗಿ ನಾವು ಅವನಿಗೆ ಬುದ್ಧಿ ಹೇಳಿದ್ದೆವು. ಆರೋಪಿತನಿಗೆ ಎಷ್ಟೇ ಬುದ್ಧಿವಾದ ಹೇಳಿದ್ದರೂ ಬೇರೆಯವರ ಜೊತೆ ಬೇರೆ ಮನೆಯಲ್ಲಿ ಇದ್ದು, ಚಾಸಾ 4 ರವರ ಜೊತೆ ಬಂದು ವಾಸ ಮಾಡದೇ ಇರುವ ಕಾರಣಕ್ಕಾಗಿ ನಾನು ಚಾಸಾ 4 ರವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೆ. ನಂತರ ಚಾಸಾ 4 ಮತ್ತು ಆರೋಪಿತನ ಮಧ್ಯೆ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದೆವು.

ದಿಃ 05.08.2021ರಂದು ರಾತ್ರಿ 10 ಗಂಟೆ ಸಮಯದಲ್ಲಿ ಆರೋಪಿತನು ನಮ್ಮ ಮನೆಗೆ ಬಂದು ಚಾಸಾ 4 ರವರಿಗೆ ತಮ್ಮ ಮನೆಗೆ ಬರಲು ಒತ್ತಾಯ ಮಾಡಿದನು. ಆ ವೇಳೆಯಲ್ಲಿ ಚಾಸಾ 4 ರವರು ಆರೋಪಿತನ ಮನೆಗೆ ಹೋಗಲು ಒಪ್ಪದೇ ಇರುವಾಗ ಆರೋಪಿತನು ನನಗೆ ನಿನ್ನ ಸಲುವಾಗಿ ಚಾಸಾ 4 ಬರುತ್ತಿಲ್ಲ ಅಂತ ನನಗೆ ಬೋಳಿಮಗಳೆ, ಸೂಳೆಮಗಳೆ ಅಂತ ಬೈದನು, ಆಗ ನಾನು ಅವನಿಗೆ ಕಪಾಳಕ್ಕೆ ಹೊಡೆದಾಗ ಅವನು ನನಗೆ ಹೊಡೆದು ಕಾಲಿನಿಂದ ಒದ್ದಿರುತ್ತಾನೆ. ಕೆಳಗೆ ಬಿದ್ದ ನನಗೆ ಆರೋಪಿತನು ಕಾಲಿನಿಂದ ತುಳಿದಿರುತ್ತಾನೆ. ಚಾಸಾ 4 ಕೂಗಿಕೊಂಡಾಗ ನಮ್ಮ ಮನೆಯಲ್ಲಿ ಬಾಡಿಗೆ ಇದ್ದ ಚಾಸಾ 5 ರಿಂದ 7 ರವರು ಓಡಿ ಬಂದು ಜಗಳ ಬಿಡಿಸಿರುತ್ತಾರೆ. ನಂತರ ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಠಾಣೆಗೆ ಹೋಗಿ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಯು ದೂರನ್ನು ಮತ್ತು ಅದರ ಮೇಲಿರುವ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ1 ಮತ್ತು ನಿಪಿ1ಎ ಅಂತ ಗುರುತಿಸಲಾಯಿತು. ದೂರು ನೀಡಿದ ನಂತರ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಅದನ್ನು ನಿಪಿ2 ಮತ್ತು ನಿಪಿ2ಎ ಅಂತ ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ. ಕೇ. ಸ. ಇ**

**46 ನೇ ಅ.ಮು. ನ್ಯಾ. ದಂ. ನ್ಯಾ.**